<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 439-25** **ಪಿಡಬ್ಲ್ಯೂಃ** **<u>4</u>**

**ಸಿಡಬ್ಲ್ಯೂಃ** **<u>9</u>**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಾಜು ತಿಗಣಿ |
| ತಂದೆ ಹೆಸರು | ಃ | ಮಂಜುನಾಥ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ಪೋಲಿಸ ಪೇದೆ |
| ವಾಸಸ್ಥಳ | ಃ | ಕೇಶ್ವಾಪೂರ ಪೋಲಿಸ ಠಾಣೆ , ಹುಬ್ಬಳ್ಳಿ |

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 12.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 15.7.2024 ರಿಂದ 30.6.2025 ವರೆಗೆ ಪೂರ್ವ ಸಂಚಾರಿ ಪೋಲಿಸ ಠಾಣೆಯಲ್ಲಿ ನಾನು ಸೇವೆ ಸಲ್ಲಿಸಿದ್ದೇನೆ.

ದಿಃ 27.8.2024 ರಂದು ರಾತ್ರಿ 9 ಗಂಟೆಯಿಂದ 11 ಗಂಟೆವರೆಗೆ ಗದಗ ರೋಡ ರೇಲ್ವೆ ಅಂಡರ ಬ್ರಿಜ್ ಬಳಿ ಸುಗಮ ಸಂಚಾಕ್ಕೆ ಸೇವೆಗೆ ನೇಮಕ ಮಾಡಿದ್ದರು. ರಾತ್ರಿ 10 ಗಂಟೆಗೆ ಗದಗ ರೋಡ ಕಡೆಯಿಂದ ರೇಲ್ವೆ ಅಂಡರ ಬ್ರಿಜ್ ದಾಟಿ ಬಿ ಎಸ್ ಎನ್ ಎಲ್ ಕಚೇರಿ ಕಡೆಗೆ ಹೋಗುವಾಗ ಒಂದು ಗೂಡ್ಸ ವಾಹನ ಮಹಿಳೆಗೆ ಡಿಕ್ಕಿಪಡಿಸಿರುತ್ತದೆ. ಸದರಿ ಮಹಿಳೆ ಕಾಮತ ಹೊಟೇಲ ಕಡೆಯಿಂದ ಬಿ ಎಸ್ ಎನ್ ಎಲ್ ಕಚೇರಿ ಕಡೆಗೆ ನಡೆದುಕೊಂಡು ಹೊರಟಿದ್ದಳು. ಗೂಡ್ಸ ವಾಹನ ವೇಗವಾಗಿ ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದಿದ್ದಾನೆ. ಮಹಿಳೆ ರೋಡಿನ ಮೇಲೆ ಬಿದ್ದಾಗ ಜೋರಾಗಿ ಬಾಯಿ ಮಾಡಿದ್ದಳು. ನಾನು ಅಲ್ಲಿದ್ದ ಸ್ಥಳೀಯರಾದ ಚಾಸಾ-12 ಹಾಗೂ 13 ರವರು ಸೇರಿ ಸ್ಥಳಕ್ಕೆ ಹೋದೆವು. ಮಹಿಳೆಗೆ ಬಲಗಾಲಿಗೆ ತೀವ್ರ ಸ್ವರೂಪದ ಗಾಯವಾಗಿ ರಕ್ತ ಸೋರುತ್ತಿತ್ತು. ಸದರಿ ಮಹಿಳೆಯನ್ನು ಕರೆದುಕೊಂಡು ಹೋಗಿ ರೋಡಿನ ಪಕ್ಕದಲ್ಲಿ ಕೂಡ್ರಿಸಿದೆವು. ಸ್ಥಳೀಯರು ಮಹಿಳಾ ಸಂಬಂಧಿಕರಿಗೆ ಪೋನ್ ಮಾಡಿದರು. ಅಪಘಾತ ಪಡಿಸಿದ ವಾಹನ ಅಲ್ಲೆ ಇತ್ತು. ಅದ ನಂಬರ ನೋಡಲಾಗಿ, ಕೆಎ-26 ಕೆಎ-2672 ಇದ್ದು, ಸದರಿ ಚಾಲಕನನ್ನು ವಿಚಾರಿಸಿದಾಗ ಆತನು ತನ್ನ ಹೆಸರು ಶಬ್ಬೀರ ಬಳ್ಳಾರಿ ಅಂತಾ ಹೇಳಿದನು.

ಮಹಿಳಾ ಸಂಬಂಧಿಕರು ಚಾಸಾ-1 ರವರು ಬಂದಿದ್ದ, ಸ್ಥಳ ವೀಕ್ಷಣೆ ಮಾಡಿದರು, ಹಾಗೂ ಆಟೋದಲ್ಲಿ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದಾರೆ. ನಾನು ಠಾಣಾಧಿಕಾರಿ ಚಾಸಾ-14 ರವರಿಗೆ ವಿಷಯ ತಿಳಿಸಿದೆನು. ನಂತರ ಚಾಸಾ-14 ಹಾಗೂ 15 ರವರು ಸ್ಥಳಕ್ಕೆ ಬಂದಿದ್ದಾರೆ. ವಾಹನ ಹಾಗೂ ಆರೋಪಿಯನ್ನು ಕರೆದುಕೊಂಡು ಹೋಗಿದ್ದಾರೆ. ಚಾಸಾ-1 ರವರು ದೂರು ಕೊಟ್ಟ ಬಗ್ಗೆ ಹೇಳಿಕೆ ಪಡೆದಿದ್ದಾರೆ. ದಿಃ 16.9.2024 ರಂದು ಗಾಯಾಳು ಮರಣ ಹೊಂದಿದ ಬಗ್ಗೆ ಚಾಸಾ-24 ರವರಿಂದ ವಿಷಯ ತಿಳಿಸಿರುತ್ತಾರೆ. ಈ ಕುರಿತು ನಾನು ಮರು ಹೇಳಿಕೆ ಹಾಗೂ ಹೇಳಿಕೆ ನೀಡಿದ್ದೇನೆ. ಸಾಕ್ಷಿ ಆರೋಪಿ ನೋಡಿ ಗುರುತಿಸಿದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ವಿ ಎಸ್, ವಕೀಲರಿಂದಃ**

ನನ್ನ ಸೇವೆ ರಾತ್ರಿ 9 ರಿಂದ 11 ಗಂಟೆವರೆಗೆ ಇತ್ತು. ನಾನು ರೇಲ್ವೆ ಅಂಡರ ಬ್ರಿಜ್ ಕಡೆಗೆ ಇದ್ದೆನು. ಯಾವುದೇ ವಾಹನ ಗದಗದಿಂದ ಪೋಸ್ಟ ಕಚೇರಿಗೆ ಬರಬೇಕಾದರೆ ಅಂಡರ ಬ್ರಿಜ್ ಕೆಳಗಡೆ ಬರಬೇಕೆಂದರೆ ಸರಿ. ಅಲ್ಲಿ ರೋಡ ಕ್ರಾಸ ಇದೆ ಅಂದರೆ ಸರಿ. ಗದಗ ಅಂಡರ ಬ್ರಿಜ್ ದಿಂದ ಬರುವಾಗ ರೋಡ ತಿರುವು ಇದೆ ಅಂದರೆ ಸರಿ. ಗದಗ ಗೆ ನೇರವಾಗಿ ಹೋಗಬಹುದು. ಆ ಕಾಲಕ್ಕೆ ಜನ ಸಾಧಾರಣಾವಾಗಿ ಓಡಾಡುತ್ತಾರೆ. ಅಲ್ಲಿ ಹೊಟೇಲ, ಸ್ವಿಟ್ ಮಾರ್ಟ, ಟಿಕೇಟ್ ಕೊಡುವ ಸೆಂಟರ ಇವೆ ಅಂದರೆ ಸರಿ. ಅವೆಲ್ಲ ತೆಗೆದಿದ್ದವು. ಅಂಡರ ಬ್ರಿಜ್ ದಿಂದ ಅಪಘಾತ ವಾದ ಸ್ಥಳ ನೋಡಲಾಗುವುದಿಲ್ಲ ಅಂದರೆ ಸರಿ. ನಾನು ನಿಂತ ಸ್ಥಳದಿಂದ ಅಪಘಾತ ಸ್ಥಳ ಕಾಣುವುದಿಲ್ಲ ಅಂದರೆ ಸರಿ. ರೇಲ್ವೆ ನಿಲ್ದಾಣದಿಂದ ರಾತ್ರಿ 9 ಗಂಟೆಗೆ 6 ರೈಲುಗಳು ಹೋಗುತ್ತವೆ ಅಂದರೆ ಗೊತ್ತಿಲ್ಲ. ದೇಹಲಿ, ಬಳ್ಳಾರಿ, ಬೆಂಗಳೂರು, ಧಾರವಾಡ ಕಡೆಗೆ ರೇಲ್ವೆ ಹೋಗುತ್ತವೆ ಅಂದರೆ ಗೊತ್ತಿಲ್ಲ. ಆ ಕಾಲಕ್ಕೆ ಜನಸಂದಣಿ ಬಹಳ ಇರುತ್ತದೆ ಅಂದರೆ ಸರಿಯಲ್ಲ. ನನಗೆ ಠಾಣಾಧಿಕಾರಿ ಫೋನ್ ನಂಬರ ನೆನಪಿಲ್ಲ. ಮೃತ ವ್ಯಕ್ತಿಯ ಸಂಬಂಧಿಕರಿಗೆ ಯಾವ ಫೋನ್ ನಂಬರದಿಂದ ಫೋನ್ ಮಾಡಿದ್ದರು ಅಂತಾ ಗೊತ್ತಿಲ್ಲ, ಯಾರು ಫೋನ್ ಮಾಡಿದ್ದರೆಂದು ಗೊತ್ತಿಲ್ಲ. ಫೋನ್ ಮಾಡಿದವರ ಹೆಸರು ಹೇಳಿಕೆ ಯಲ್ಲಿ ಹೇಳಿಲ್ಲ ಅಂದರೆ ಸರಿ. ನಿಜವಾಗಿ ಫೋನ್ ಮಾಡಿದ್ದರೆ ವ್ಯಕ್ತಿ ಹೆಸರು ಹಾಗೂ ಫೋನ್ ನಂಬರ ಹೇಳಿಕೆಯಲ್ಲಿ ಬರುತ್ತಿತ್ತು ಅಂದರೆ ಸರಿಯಲ್ಲ. ದೂರುದಾರನ ಮನೆ ಎಷ್ಟು ದೂರದಲ್ಲಿದೆ ಅಂತಾ ಗೊತ್ತಿಲ್ಲ. ಅಲ್ಲಿ ಸಾರ್ವಜನಿಕರು ಸೇರಿದ್ದರು, ಅಲ್ಲಿ 20-25 ಜನ ಸೇರಿದ್ದರು. ಅವರ ಹೆಸರು ಗೊತ್ತಿಲ್ಲ. ಅಪಘಾತ ವಾದ ನಂತರ ಜನ ಸೇರಿರುತ್ತಾರೆ. ಜನ ಸೇರಿದ್ದಾರೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಜವಾಗಲೂ ಘಟನೆ ನಡೆದಿದ್ದರೆ ಹೊಟೇಲ, ಸ್ವಿಟ ಮಾರ್ಟ, ಟಿಕೇಟ ಕೌಂಟರ ರವರ ಹೇಳಿಕೆ ಪಡೆಯುತ್ತಿದ್ದರು ಅಂದರೆ ಸರಿಯಲ್ಲ.

ಮೃತ ಮಹಿಳೆಗೆ 65 ವರ್ಷ ವಯಸ್ಸಾಗಿತ್ತು. ಆ ಕಾಲಕ್ಕೆ ರೋಡ ತೆಗ್ಗು ಇರಲಿಲ್ಲ. ರೋಡ ಚೆನ್ನಾಗಿತ್ತು. ಮಹಿಳೆ ರೋಡ ಹದಿಗೆಟ್ಟಿದ್ದರಿಂದ ಬಿದ್ದು ಗಾಯಪಡಿಸಿಕೊಂಡು ಮರಣ ಹೊಂದಿದ್ದಾಳೆ ಅಂದರೆ ಸರಿಯಲ್ಲ. ವಾಹನ ವೇಗವಾಗಿ ಬಂದರೆ, ಸ್ಥಳದಲ್ಲಿ ಮರಣ ಹೊಂದಬಹುದು ಅಂದರೆ, ಮರಣ ಹೊಂದಬಹುದು ಅಥವಾ ಹೊಂದದೆ ಇರಬಹುದು. ಲಾರಿ 50- 60 ಕಿಮೀ ವೇಗವಾಗಿ ಬಂದಿರಬಹುದು. ಎಲ್ಲಾ ವಾಹನಗಳು ವೇಗವಾಗಿ ಹೋಗುವುದ್ದು ಹೇಳಲು ಬರುವುದಿಲ್ಲ. ಅಪಘಾತ ವಾದ ನಂತರ ಈ ಗಾಡಿ ನೋಡಿದ್ದೇನೆ. ನಾನು ಮೇಲಾಧಿಕಾರಿ ಮಾತು ಕೇಳಿ ಹೇಳಿಕೆ ನೀಡುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹೇಳುವ ರೀತಿಯಲ್ಲಿ ಅಪಘಾತ ವಾಗಿಲ್ಲ ಅಂದರೆ ಸರಿಯಲ್ಲ. ನಾನು ಆ ಸ್ಥ,ಳದಲ್ಲಿ ಇರಲಿಲ್ಲ ಹಾಗೂ ಸೇವೆಯಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ಯಾವುದೇ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.